586

## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2603
2. ಸದಸ್ಯರ ಹೆಸರು : ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 24.03.2022
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿ

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ನಗರದ ಭ್ರಷ್ಟಾಚಾರ ನಿಗ್ರಹ ದಳದ ಕೇಂದ್ರ ಕಛೇರಿಗೆ ಮಂಜೂರಾದ ಪೊಲೀಸ್ ಆಯುಕ್ತರ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; ಎಷ್ಟು ವರ್ಷಗಳಿಂದ ಸದರಿಯವರುಗಳು ಕಾರ್ಯ ನಿರ್ವಹಿಸುತ್ತಿದ್ದಾರೆ; (ಹೆಸರು, ಹುದ್ದೆಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ನಗರದ ಭ್ರಷ್ಟಾಚಾರ ನಿಗ್ರಹ ದಳದ ಕೇಂದ್ರ ಕಚೇರಿಗೆ ಪೊಲೀಸ್ ಆಯುಕ್ತರ ಹುದ್ದೆಗಳು ಮಂಜೂರಾಗಿರುವುದಿಲ್ಲ. 17 ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಗಳು ಮಂಜೂರಾಗಿದ್ದು, ಈ ಹುದ್ದೆಗಳಲ್ಲಿ 15 ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಸದರಿಯವರುಗಳ ಹೆಸರು, ಎಂದಿನಿಂದ ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬ ವಿವರಗಳನ್ನು <u>ಅನುಬಂಧ</u>ದಲ್ಲಿ ಒದಗಿಸಲಾಗಿದೆ. |
| (ಆ) | ಇವರುಗಳಲ್ಲಿ 5 ವರ್ಷಗಳಿಗಿಂತ ಹೆಚ್ಚು ಕಾಲ ಬೆಂಗಳೂರು ನಗರದ ಭ್ರಷ್ಟಾಚಾರ ನಿಗ್ರಹ ದಳದ ಕೇಂದ್ರ ಕಛೇರಿಯಲ್ಲಿಯೇ ಕಾರ್ಯನಿರ್ವಹಿಸಿದ ಪೊಲೀಸ್ ಆಯುಕ್ತರ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್‌ಗಳ ಸಂಖ್ಯೆ ಎಷ್ಟು; (ಹೆಸರು, ಹುದ್ದೆಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ನಗರದ ಭ್ರಷ್ಟಾಚಾರ ನಿಗ್ರಹ ದಳದ ಕೇಂದ್ರ ಕಚೇರಿಯಲ್ಲಿ ಪೊಲೀಸ್ ಆಯುಕ್ತರ ಹುದ್ದೆ ಮಂಜೂರಾಗದೇ ಇರುವುದರಿಂದ ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ಅವಕಾಶ ಇರುವುದಿಲ್ಲ. ಹಾಗೂ 5 ವರ್ಷಗಳಿಗಿಂತ ಹೆಚ್ಚು ಕಾಲ ಕಾರ್ಯ ನಿರ್ವಹಿಸಿದ ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಯಾರೂ ಇರುವುದಿಲ್ಲ. |
| (ಇ) | ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಆಯುಕ್ತರ ಹಾಗು ಪೊಲೀಸ್ ಇನ್ಸ್‌ಪೆಕ್ಟರ್‌ಗಳ ನಿಯೋಜನಾ ಅವಧಿಯು ಒಂದು ವರ್ಷಕ್ಕೆ ಸೀಮಿತಗೊಳಿಸಿರುವಂತೆ ಭ್ರಷ್ಟಾಚಾರ ನಿಗ್ರಹ ದಳದ ಕೇಂದ್ರ ಕಛೇರಿಯಲ್ಲಿಯೂ ಸಹ ಪೊಲೀಸ್ ಆಯುಕ್ತರ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಗಳ ನಿಯೋಜನಾ ಅವಧಿಯು 1 ವರ್ಷಕ್ಕೆ ಸೀಮಿತಗೊಳಿಸದಿರಲು ಕಾರಣವೇನು; | ಬೆಂಗಳೂರು ನಗರದ ಭ್ರಷ್ಟಾಚಾರ ನಿಗ್ರಹ ದಳದ ಕೇಂದ್ರ ಕಚೇರಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ರವರುಗಳ ನಿಯೋಜನಾ ಅವಧಿಯನ್ನು ಒಂದು ವರ್ಷಕ್ಕೆ ಸೀಮಿತಗೊಳಿಸಿರುವುದಿಲ್ಲ. ಆದರೆ, ಅವರ ಬದಲಾವಣೆಗೆ ಕನಿಷ್ಠ ಒಂದು ವರ್ಷದ ಸೇವೆಯನ್ನು ಎ.ಸಿ.ಬಿ. ಘಟಕದಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ. |



Generated from eOffice by G JAGADEESHA, CMO-JS(GJ), JOINT SECREATRY, CMO on 22/03/2022 06:07 PM

| | | |
|---|---|---|
| (ಈ) | ಪೊಲೀಸ್ ಆಯುಕ್ತರ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ 5 ವರ್ಷಗಳಿಗಿಂತ ಹೆಚ್ಚು ಕಾಲ ಬೆಂಗಳೂರು ನಗರದ ಭ್ರಷ್ಟಾಚಾರ ನಿಗ್ರಹ ದಳದ ಕೇಂದ್ರ ಕಛೇರಿಯಲ್ಲಿಯೇ ಕಾರ್ಯನಿರ್ವಹಿಸಲು ನಿಯೋಜಿಸಲು ಕಾರಣವೇನು; ಒಂದೇ ಕಛೇರಿಯಲ್ಲಿ ಹೆಚ್ಚು ಅವಧಿವರೆಗೆ ಒಬ್ಬರನ್ನೇ ನಿಯೋಜಿಸಿರುವುದರಿಂದ, ಇವರುಗಳೇನು ಭ್ರಷ್ಟಾಚಾರದಲ್ಲಿ ತೊಡಗುವ ಸಂಭವವಾಗುವುದಿಲ್ಲವೇ; | ಬೆಂಗಳೂರು ನಗರದ ಭ್ರಷ್ಟಾಚಾರ ನಿಗ್ರಹ ದಳದ ಕೇಂದ್ರ ಕಚೇರಿಯಲ್ಲಿ 5 ವರ್ಷಗಳಿಗಿಂತ ಹೆಚ್ಚು ಕಾಲ ಕಾರ್ಯ ನಿರ್ವಹಿಸಿದ ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಯಾರೂ ಇರುವುದಿಲ್ಲ. |
| (ಉ) | ಹೌದಾದಲ್ಲಿ, 5 ವರ್ಷಗಳಿಗಿಂತ ಹೆಚ್ಚು ಕಾಲ ಬೆಂಗಳೂರು ನಗರದ ಭ್ರಷ್ಟಾಚಾರ ನಿಗ್ರಹ ದಳದ ಕೇಂದ್ರ ಕಛೇರಿಯಲ್ಲಿಯೇ ಕಾರ್ಯನಿರ್ವಹಿಸಿದ ಪೊಲೀಸ್ ಆಯುಕ್ತರ ಹಾಗು ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು ವರ್ಗಾಯಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು) | ಅನ್ವಯಿಸುವುದಿಲ್ಲ. |

ಸಂಖ್ಯೆ: ಸಿಆಸುಇ 28 ಎಸಿಬಿ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

"ಅನುಬಂಧ-ಅ"

ಭ್ರಷ್ಟಾಚಾರ ನಿಗ್ರಹ ದಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಇನ್ಸ್‌ಪೆಕ್ಟರ್‌ರವರುಗಳ ವಿವರ

| ಕ್ರಮ ಸಂಖ್ಯೆ | ಹೆಸರು | ಹುದ್ದೆ | ಕರ್ತವ್ಯ ನಿರ್ವಹಿಸುತ್ತಿರುವ ಎಸಿಬಿ ಪೊಲೀಸ್ ಠಾಣೆ/ಕಚೇರಿ | ಎಸಿಬಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿದ ದಿನಾಂಕ | ಸೇವೆ ಸಲ್ಲಿಸಿರುವ ಅವಧಿ |
|---|---|---|---|---|---|
| 1. | ಶ್ರೀ ದಯಾನಂದ ಎಂ.ಜಿ | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 14-01-2020 | 2 ವರ್ಷ 2 ತಿಂಗಳು |
| 2. | ಶ್ರೀಮತಿ ರೇಣುಕಾ.ಎ.ವಿ | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 09-03-2020 | 2 ವರ್ಷ |
| 3. | ಶ್ರೀ ಮಹಮ್ಮದ್.ಎಸ್.ಅಲಿ | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 12-08-2020 | 1 ವರ್ಷ 7 ತಿಂಗಳು |
| 4. | ಶ್ರೀ ಲೋಕೇಶ್. ಎಂ.ಜಿ | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 14-09-2020 | 1 ವರ್ಷ 6 ತಿಂಗಳು |
| 5. | ಶ್ರೀ ಸಾದೀಕ್ ಪಾಷಾ | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 29-09-2020 | 1 ವರ್ಷ 5 ತಿಂಗಳು |
| 6. | ಶ್ರೀ ಸುರೇಶ್ ಕುಮಾರ್.ಪಿ | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 07-12-2020 | 1 ವರ್ಷ 3 ತಿಂಗಳು |
| 7. | ಶ್ರೀ ವೀರೇಂದ್ರ ಪ್ರಸಾದ್.ಎಸ್.ಆರ್ | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 11-02-2021 | 1 ವರ್ಷ 1 ತಿಂಗಳು |
| 8. | ಶ್ರೀ ಬಾಲಾಜಿಬಾಬು.ಹೆಚ್.ಎನ್ | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 16-02-2021 | 1 ವರ್ಷ 1 ತಿಂಗಳು |
| 9. | ಶ್ರೀ ಎಸ್.ಎನ್.ಹಾಲಪ್ಪ | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 05-07-2021 | 8 ತಿಂಗಳು |
| 10. | ಶ್ರೀ ಯೋಗಾನಂದ ಸೋನಾರ್, | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 03-06-2021 | 9 ತಿಂಗಳು |
| 11. | ಶ್ರೀ ನಯಾಜ್ ಬೇಗ್, | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 04-06-2021 | 9 ತಿಂಗಳು |
| 12. | ಶ್ರೀ. ಕೆ. ವೆಂಕಟೇಶ್, ಪಿಐ | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 16-06-2021 | 9 ತಿಂಗಳು |
| 13. | ಶ್ರೀ ಮಂಜುನಾಥ್. ಎಂ, ಪಿಐ | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 07-06-2021 | 9 ತಿಂಗಳು |
| 14. | ಶ್ರೀ. ಮಂಜುನಾಥ್ ಜಿ. ಹೂಗಾರ್, | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 07-09-2021 | 6 ತಿಂಗಳು |
| 15. | ಶ್ರೀ. ಬಸವರಾಜ್. ಜಿ. ಪುಲಾರಿ, | ಪಿಐ | ಎಸಿಬಿ ಪೊಲೀಸ್ ಠಾಣೆ, ಬೆಂಗಳೂರು ನಗರ | 12-07-2021 | 8 ತಿಂಗಳು |

Superitendent of Police, (Admin)
Karnataka State Anti-Corruption Bureau.
Bengaluru.